


ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಕ್ರಿ.ಶ. 1554ರ ಕುಮಾರವ್ಯಾಸನ ಹಸ್ತಪ್ರತಿಯ ತಾಳೆಯೋಲೆಯ ಒಳಗರಿಯಲ್ಲಿ ಕೊರೆದಿರುವ ಚಿತ್ರ.

ಚಿತ್ರಕೃಪೆ: ಪ್ರೊ. ಎನ್.ಎಂ. ತಳವಾರ್, ಚಿತ್ರ: ಕುಪ್ನಳ್ಳಿ ಎಂ. ಭೈರಪ್ಪ

ಯುದ್ಧ ಮುಗಿದು ಕರ್ಣನ ಸಾವಿನ ಸಂದರ್ಭದಲ್ಲಿಯೂ ಅಂತರಂಗದ ಆಳದಿಂದ ಅದನ್ನೇ ಮತ್ತೆ ವ್ಯಕ್ತಪಡಿಸುವ ಈ ಕೆಳಗಿನ ಒಂದೆರಡು ಪದ್ಯಗಳನ್ನು ಗಮನಿಸಬಹುದು–

ದೇವ ಹಗೆಯಾಗಿರನು ಕರ್ಣನಿ
ದಾವ ಹದನೆಂದರಿಯೆ ಮನದಲಿ
ನೋವು ಮಿಗುವುದು ಕೈಗಳೇಳವು ತುಡುಕುವಡೆ ಧನುವ ।
ಜೀವವೀತನ ಮೇಲೆ ಕರಗುವು
ದಾವ ಸಖನೋ ಶತ್ರುವೆಂಬೀ
ಭಾವನೆಯ ಬಗೆ ಬೀಳುಕೊಂಡುದು ಕರ್ಣನಾರೆಂದ ॥

ಧರೆಯ ಬಿಡುವೆವು ಕುರುಪತಿಗೆ ನಾ
ವರುವರೊಡಹುಟ್ಟಿದರು ವಿಪಿನಾಂ
ತರದೊಳಗೆ ಭಜಿಸುವೆವು ಭಾವ ಶುದ್ಧಿಯಲಿ
ತೆರಳುವೀ ಸಿರಿಗೋಸುಗ ಸೋ
ದರನ ಕೊಲುವೆನೆ, ಕೃಷ್ಣ ಕರುಣಿಸು
ಕರುಣಿಸಕಟಾ ಕೃಷ್ಣ ಹೇಳೈ ಕರ್ಣನಾರೆಂದ ॥

ಕರ್ಣನು ಶಲ್ಯ ಸಾರಥ್ಯವನ್ನು ಕಳೆದುಕೊಂಡು ಯುದ್ಧರಂಗದಲ್ಲಿ ಅದ್ದಿದ ರಥದ ಗಾಲಿಯನ್ನು ಮೇಲೆತ್ತುವ ಪ್ರಯತ್ನದಲ್ಲಿ ಎಷ್ಟು ಅಸಹಾಯಕನಾಗಿರುವನೋ, ಅದೇ ಕರ್ಣನನ್ನು ಕೊಲ್ಲಬೇಕೆಂದು ಇದುವರೆಗೆ ಘನರೋಷದಿಂದ ಯುದ್ಧ ಮಾಡಿದ ಅರ್ಜುನನೂ 'ಕೈಗಳೇಳವು ತುಡುಕುವಡೆ ಧನುವ' ಎನ್ನುತ್ತಿದ್ದಾನೆ.